**<u>ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**<u>ಸಿ. ಸಿ. ನಂಬರಃ 3562/2025</u>**

**ಫಿರ್ಯಾದುದಾರರು** ಶ್ರೀ ಪದ್ಮಶ್ರೀ ಸೌಹಾರ್ದ ಪತ್ತಿನ ಸಹಕಾರಿ ಸಂಘ, ನಿಯಮಿತ, ಕುಂಠವಾಣಿ, ಭಟ್ಕಳ,
ಪ್ರಧಾನ ಕಚೇರಿ, ಕುಂಠವಾಣಿ, ಹಾಡುವಳ್ಳಿ, ಭಟ್ಕಳ
ಸರ್ಪನಕಟ್ಟೆ ಶಾಖೆ, ಪ್ರತಿನಿಧಿಸುವವರು ಇದರ ಶಾಖಾ ವ್ಯವಸ್ಥಾಪಕರು,
ಹಾಗೂ ಅಧಿಕಾರ ಹೊಂದಿರುವವರು,
ಶ್ರೀ ಹರೀಶ ಧರ್ಮ ನಾಯ್ಕ

**– ವಿರುದ್ಧ –**

**ಆರೋಪಿತರು** ಶ್ರೀ ಗಣೇಶ ಶಂಕರ ನಾಯ್ಕ,
ವಯಸ್ಸುಃ 46 ವರ್ಷ
ಸಾಃ ಶಿರೂರಮನೆ, ಬೊಮ್ಮನಕೇರಿ, ಬೆಳ್ಕೆ, ಭಟ್ಕಳ.

**<u>ಆಪಾದನೆ</u>**

ಆರೋಪಿಯಾದ ನೀವು ದಿನಾಂಕಃ 30-03-2024 ರಂದು ಪಿರ್ಯಾದಿ ಸಂಸ್ಥೆಯ ಸರ್ಪನಕಟ್ಟೆ ಶಾಖೆಯಿಂದ ರೂ.1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಹಣವನ್ನು ವೈಯಕ್ತಿಕ ಸಾಲವಾಗಿ ಸಾಲದ ಖಾತೆ ಸಂಖ್ಯೆ: PL 2/151/15 ರಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಸದ್ರಿ ಸಾಲವನ್ನು ವಾರ್ಷಿಕ ಶೇಕಡಾ 16% ಮತ್ತು 3% ದಂಡದ ಬಡ್ಡಿ ಸಮೇತ ಮರುಪಾವತಿ ಮಾಡುವುದಾಗಿ ಸಾಲದ ಅರ್ಜಿ, ಸಾಲದ ಕರಾರು ಪತ್ರ, ಡಿಮಾಂಡ್ ಪ್ರಾಮಿಸರಿ ನೋಟ್ ಮುಂತಾದ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಆದರೆ ಸದ್ರಿ ಸಾಲದ ಹಣವನ್ನು ನೀವು ಒಪ್ಪಿಕೊಂಡಂತೆ ಪಿರ್ಯಾದಿ ಸಂಸ್ಥೆಗೆ ಮರುಪಾವತಿ ಮಾಡಿರುವುದಿಲ್ಲ. ದಿನಾಂಕಃ 03-09-2025 ರ ತನಕ ಅಸಲು ಬಡ್ಡಿ ಸೇರಿ ಒಟ್ಟೂ ರೂ. 1,13,304/- (ರೂಪಾಯಿ ಒಂದು ಲಕ್ಷದ ಹದಿಮೂರು ಸಾವಿರದ ಮೂನ್ನೂರ ನಾಲ್ಕು ಮಾತ್ರ) ಬಾಕಿ ಇರುತ್ತದೆ. ಸದ್ರಿ ಸಾಲದ ಮರುಪಾವತಿಗಾಗಿ ಕೆನರಾ ಬ್ಯಾಂಕ್, ಬೆಳ್ಕೆ ಶಾಖೆಯ ಚೆಕ್ ನಂ. 046877 ನ್ನು ರೂ. 1,13,304/- (ರೂಪಾಯಿ ಒಂದು ಲಕ್ಷದ ಹದಿಮೂರು ಸಾವಿರದ ಮೂನ್ನೂರ ನಾಲ್ಕು ಮಾತ್ರ) ಕ್ಕೆ ದಿನಾಂಕಃ 03-09-2025 ಚೆಕ್ ಅನ್ನು ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸಂಘದವರು ಅವರ ವ್ಯವಹಾರದ ಬ್ಯಾಂಕಾದ ದಿ ಕೆನರಾ ಡಿಸ್ಟ್ರಿಕ್ಟ್ ಕೋ-ಆಪ್ ಬ್ಯಾಂಕ್ ಲಿ., ಭಟ್ಕಳ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರಪಡಿಸಿದಾಗ, “ಸಾಕಷ್ಟು ಹಣವಿಲ್ಲಾ" ಎಂಬ ಹಿಂಬರಹದೊಂದಿಗೆ ದಿನಾಂಕಃ 08-09-2025 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 16-09-2025 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಮಗೆ ಕಳುಹಿಸಿದ್ದು, ನೋಟಿಸು ತಲುಪಿದ 15 ದಿನಗಳೊಳಗೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ. ಸದ್ರಿ ನೋಟಿಸ್ಸನ್ನು ನೀವು ದಿನಾಂಕಃ 30-09-2025 ರಂದು ಸ್ವೀಕರಿಸಿರುತ್ತೀರಿ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೆಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 29-12-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.